**ಕರ್ನಾಟಕ ಸರ್ಕಾರ**

ಸಂ:ಗ್ರಾಅಪ/24/ಗ್ರಾನೀಸ(5)2014

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:07.02.2014

**ಇವರಿಂದ:**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಇವರಿಗೆ:**
ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.

**ಮಾನ್ಯರೆ,**

**ವಿಷಯ :** ಗ್ರಾಮೀಣಾಭಿವೃದ್ಧಿ ಹಾಗೂ ಪಂ.ರಾಜ್ ಇಲಾಖೆಯ ಪ್ರಯೋಗ ಶಾಲೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ರಸಾಯನ ತಜ್ಞರಿಗೆ ನೀರಿನ ಗುಣಮಟ್ಟ ಪರೀಕ್ಷಿಸಲು ತರಬೇತಿ ನೀಡುವ ಬಗ್ಗೆ.

**ಉಲ್ಲೇಖ :** ನೋಡಲ್ ಆಫೀಸರ್, ಗಣಿ ಮತ್ತು ಭೂವಿಜ್ಞಾನ ಇಲಾಖೆರವರ ಪತ್ರ ಸಂಖ್ಯೆ:ಗಭೂಇ/ರಪ್ರಶಾ/PRED/2013-14/1226 ದಿ:23.01.2014.

---

ಜಿಲ್ಲಾ ಮಟ್ಟದ ಪ್ರಯೋಗ ಶಾಲೆಗಳಲ್ಲಿ ತಮ್ಮ ಆಧೀನದಲ್ಲಿ ಹೊರಗುತ್ತಿಗೆ ಮೇಲೆ ಕಾರ್ಯನಿರ್ವಹಿಸುತ್ತಿರುವ ರಸಾಯನ ತಜ್ಞರುಗಳು, ಗಣಿ ಮತ್ತು ಭೂವಿಜ್ಞಾನ ಕೇಂದ್ರ ಕಛೇರಿಯಲ್ಲಿ **ಕಂದಾಯ ವಿಭಾಗವಾರು** ಈ ಕೆಳಕಂಡ ದಿನಾಂಕದಂದು ಆಯೋಜಿಸಲಾಗಿರುವ ನೀರಿನ ಗುಣಮಟ್ಟ ಪರೀಕ್ಷಾ ತರಬೇತಿಯಲ್ಲಿ ಭಾಗವಹಿಸಲು ಆದೇಶಿಸಬೇಕೆಂದು ಕೋರಿದೆ.

| ಕ್ರಮ ಸಂಖ್ಯೆ: | ಸ್ಥಳ | ದಿನಾಂಕ |
|---|---|---|
| 1 | ಬೆಂಗಳೂರು | 03.03.2014 ರಿಂದ 07.03.2014ರವರೆಗೆ |
| 2 | ಮೈಸೂರು | 10.03.2014 ರಿಂದ 14.03.2014ರವರೆಗೆ |
| 3 | ಬೆಳಗಾಂ | 17.03.2014 ರಿಂದ 21.03.2014ರವರೆಗೆ |
| 4 | ಗುಲ್ಬರ್ಗಾ | 24.03.2014 ರಿಂದ 28.03.2014ರವರೆಗೆ |

ತರಬೇತಿಯ ನಿಯೋಜನೆಯ ಅನುಪಾಲನಾ ವರದಿಯನ್ನು ಸರ್ಕಾರಕ್ಕೆ ನೀಡಬೇಕು. ಜೊತೆಗೆ ಈಗಾಗಲೇ CE,PRED ಅನುಮೋದಿತ ಕ್ರಿಯಾ ಯೋಜನೆಯಡಿ ಜಿಲ್ಲಾ / ಉಪ-ವಿಭಾಗವಾರು ನೀರು ಪರೀಕ್ಷಾ ಪ್ರಯೋಗಾಲಯಗಳ ಸ್ಥಾಪನೆ / ಅಭಿವೃದ್ಧಿ ಕುರಿತಂತೆ ನೀಡಿರುವ ಮಾರ್ಗಸೂಚಿಗಳಂತೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಕಾಲಮಿತಿಯೊಳಗೆ ಪರಿವೀಕ್ಷಿಸಿ / ಹಿಂಬಾಲಿಸಿ ಕ್ರಮವಹಿಸಬೇಕು.

ತಮ್ಮ ವಿಶ್ವಾಸಿ,

(ರಾಮಕೃಷ್ಣ)
ಸರ್ಕಾರದ ಉಪ ಕಾರ್ಯದರ್ಶಿ(ಗ್ರಾನೀಸ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
ಇಮೇಲ್: rk3452000@gmail.com
ಫೋನ್: 22032806, ಫ್ಯಾಕ್ಸ್:22203175

**ಪ್ರತಿ:**

1. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, 2ನೇ ಮಹಡಿ, ಗ್ರಾಮೀಣಾಭಿವೃದ್ಧಿ ಭವನ, ಆನಂದರಾವ್ ವೃತ್ತ **ಬೆಂಗಳೂರು-09**. ಇವರ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಕೋರಿ ಕಳುಹಿಸಿದೆ.
2. ಮುಖ್ಯ ರಸಾಯನ ತಜ್ಞರು ಮತ್ತು ನೋಡಲ್ ಆಫೀಸರ್, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬೆಂಗಳೂರು.
3. ರಾಜ್ಯದ ಎಲ್ಲಾ (38) ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಗಳ ಕಾರ್ಯಪಾಲಕ ಇಂಜಿನಿಯರ್‌ಗಳು.